ಛೇರ್ಮನ್ : ನಾಳೆ ಬೆಳಿಗ್ಗೆ ತೆಗೆದುಕೊಳ್ಳುತ್ತೇನೆ. ಈಗ ಸಚಿವರು ಬಂದಿದ್ದಾರೆ. ಆದ್ದರಿಂದ, ಮಾನ್ಯ ಸೋಮಶೇಖರ್‌ರವರೇ, ತಾವು ಶೂನ್ಯ ವೇಳೆಯ ವಿಷಯವನ್ನು ಪ್ರಸ್ತಾಪ ಮಾಡಿ.

(ಊ) ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರ ಮೇಲೆ ವಿಧಾನ ಪರಿಷತ್ತಿನಲ್ಲಿ ಆರೋಪಗಳನ್ನು ಮಾಡಿರುವ ಬಗ್ಗೆ

+ ಶ್ರೀ ಜಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಛೇರ್ಮನ್‌ರವರೆ, ರೇಷ್ಮೆ ಕೈಗಾರಿಕಾ ಸಹಕಾರ ಸಂಘದ ವಿಚಾರವಾಗಿ 21ನೇ ತಾರೀಖು ವಿಧಾನ ಪರಿಷತ್ತಿನಲ್ಲಿ ಒಂದು ಪ್ರಶ್ನೆಯನ್ನು ಒಬ್ಬ ಸದಸ್ಯರು ಕೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಮತ್ತು ಸರ್ಕಾರದ ಕಡೆಯಿಂದ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಯವರು ನನ್ನ ಹೆಸರನ್ನು ಹೇಳಿ, ಅಲ್ಲಿ ನನ್ನ ಚಾರಿತ್ರಾವಧೆ ಆಗತಕ್ಕಂಥ ರೀತಿಯಲ್ಲಿ ಇಲ್ಲಸಲ್ಲದ ಆರೋಪಗಳನ್ನು ಮಾಡಿರುವುದರಿಂದ ಇವತ್ತಿನ ದಿವಸ ನನಗೆ ಬಹಳ ನೋವಾಗಿದೆ. ತಪ್ಪು ಮಾಡಿ ಶಿಕ್ಷೆ ಅನುಭವಿಸುವುದಾದರೆ ನನಗೇನೂ ತೊಂದರೆ ಇಲ್ಲ. ಆದರೆ ತಪ್ಪು ಮತ್ತು ಯಾವುದೇ ರೀತಿಯ ಅಪಚಾರ ಮಾಡದೆ ಮಾನಮರ್ಯಾದೆ ತೆಗೆಸಿಕೊಳ್ಳಬೇಕೆಂದರೆ ಮರ್ಯಾದೆ ಇರತಕ್ಕಂಥವನ್ನು ಸಹಿಸಿಕೊಳ್ಳುವುದಿಲ್ಲ. ಇದು ಬಹಳ ಗಂಭೀರವಾದಂಥ ವಿಚಾರ. ಆದ್ದರಿಂದ ಈ ವಿಚಾರದ ಹಿನ್ನೆಲೆಯನ್ನು ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಒಂದು ಸಹಕಾರ ಸಂಘಕ್ಕೆ 1984 ರಿಂದ 1990 ರವರೆಗೆ ಅಂದರೆ, ಆರು ವರ್ಷಗಳ ಕಾಲ ನಾನು ಅಧ್ಯಕ್ಷನಾಗಿದ್ದೆ. 1990ನೇ ಇಸವಿಯಲ್ಲಿ ಕಾರ್ಖಾನೆ ಪ್ರಾರಂಭ ಮಾಡುವುದಕ್ಕೋಸ್ಕರ ಖರೀದಿ ಮಾಡುವಂಥ ಕೆಲಸ ಆಯಿತು. ಈ ಒಂದು ಕಾರ್ಖಾನೆ ಪ್ರಾರಂಭವಾದ ದಿನದಿಂದ ಇದರ ಮೇಲೆ ಗಧಾಪ್ರಹಾರ ಪ್ರಾರಂಭವಾಯಿತು. ಇದು ರೇಷ್ಮೆ ಕೈಗಾರಿಕಾ ಸಹಕಾರ ಸಂಘವಾಗಿರುವುದರಿಂದ 1990ನೇ ಇಸವಿಯಲ್ಲಿ ಆಗಿದ್ದಂಥ ರೇಷ್ಮೆ ಇಲಾಖೆಯ ಮಂತ್ರಿಯವರು ಸೆಕ್ಷನ್ 30ಎ ಪ್ರಕಾರ ಇಲ್ಲಿ ವಿಶೇಷ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ಸಹಕಾರ ಇಲಾಖೆಗೆ ಶಿಫಾರಸ್ಸು ಮಾಡಿದರು. ಇದಕ್ಕೆ ಸಂಬಂಧಪಟ್ಟಂತೆ ನಮಗೆ ನೋಟೀಸ್ ಕೂಡ ಬಂದಿರಲಿಲ್ಲ ಮತ್ತು ಅಲ್ಲಿ ಯಾವುದೇ ರೀತಿಯ ಅವ್ಯವಹಾರ ಕೂಡ ಆಗಿರಲಿಲ್ಲ. ಆದರೂ ಸಹಿತ ವಿಶೇಷ ಅಧಿಕಾರಿಯನ್ನು ನೇಮಕ ಮಾಡಿದರು. ವಿಶೇಷ ಅಧಿಕಾರಿಯನ್ನು ನೇಮಕ ಮಾಡಿದ ತಕ್ಷಣ, ಈ ಅಧಿಕಾರಿ ಬಂದು ನಮ್ಮ ಅಧಿಕಾರವನ್ನು ಕಿತ್ತುಕೊಂಡು ಆತ ಅಧಿಕಾರವನ್ನು ವಹಿಸಿಕೊಂಡ. ಈ ಸಂದರ್ಭದಲ್ಲಿ ನಮಗೆ ವಿಧಿ ಇಲ್ಲದೆ ಇದರ ಬಗ್ಗೆ ಕೋರ್ಟ್‌ನಲ್ಲಿ ಪ್ರತಿಪಾದನೆ ಮಾಡಿದೆವು. ತಾವು ಮಾಡಿರತಕ್ಕಂಥ ಆದೇಶ ತಪ್ಪು ಮತ್ತು ಈ ಸೊಸೈಟಿಯಲ್ಲಿ ಯಾವುದೇ ರೀತಿಯ ಅವ್ಯವಹಾರ ಆಗಿಲ್ಲ. ಆದ್ದರಿಂದ ಮತ್ತೆ ಚುನಾವಣೆ ನಡೆಸಿ ಯಾರು ಮೆಜಾರಿಟಿ ಬರುತ್ತಾರೆಯೋ ಅವರಿಗೆ ಆಡಳಿತ ಮಂಡಳಿಯ ಅಧಿಕಾರವನ್ನು ವಹಿಸಿಕೊಡಬೇಕೆಂದು ಕೋರ್ಟ್ ಆದೇಶ ಮಾಡಿತ್ತು. ಎರಡು ವರ್ಷಗಳ ಕಾಲ ಇಲ್ಲಿ ವಿಶೇಷ ಅಧಿಕಾರಿಯೇ ಆಡಳಿತ ನಡೆಸುತ್ತಿದ್ದರು. ಈ ಸಮಯದಲ್ಲಿ ಏನೇನು ಬೇಕೋ ಅದನ್ನೆಲ್ಲಾ ಮಾಡಿಸಿಕೊಂಡಿದ್ದರು. ಆ ನಂತರ ಚುನಾವಣೆ ಪ್ರಾರಂಭವಾಯಿತು. ಚುನಾವಣೆ ನಾಳೆ ನಡೆಯಬೇಕಾಗಿತ್ತು. ಅಂದರೆ ಹಿಂದಿನ ದಿವಸವೆ ಚುನಾವಣೆ ರದ್ದು ಮಾಡಲಾಗಿದೆ ಎಂದು ಸರ್ಕಾರದಿಂದ ಆದೇಶ ಬಂತು. ಚುನಾವಣೆ ರದ್ದು ಆದಮೇಲೆ ನಾವು ಮತ್ತೆ ಕೋರ್ಟ್‌ಗೆ ಹೋದೆವು. ಕೋರ್ಟ್‌ನಲ್ಲಿ ಸಿಂಗಲ್ ಬೆಂಚ್‌ನಲ್ಲಿ ನಮ್ಮ ಪರವಾಗಿ ಆಯಿತು.

ಆದರೆ ಡಿವಿಜನ್ ಬೆಂಚ್‌ನಲ್ಲಿ ನಮ್ಮ ವಿರುದ್ಧವಾಯಿತು. ಆಗ ನಾವು ಮತ್ತೆ ಸುಪ್ರೀಂ ಕೋರ್ಟ್‌ಗೆ ಹೋದೆವು. First of its kind ir the Supreme Court's history, the ballot boxes were called to the Supreme Court and counting took place in the presence of the Supreme Court official. ಇಲ್ಲಿ ಇದ್ದಂಥ ವಿಶೇಷಾಧಿಕಾರಿ ಒಪ್ಪಿಕೊಳ್ಳದೆ ಅನ್ಯಥಾಹಾಗೆ ಮಾಡಿದ್ದಾರೆ ಮತ್ತು ಆಡಳಿತ ಮಂಡಳಿಗೆ ಏನಾದರೂ ಅನಾಹುತ ಆಗಬಹುದು ಇವರು ಮಾಡುತ್ತಾರೆಂದು ಸುಪ್ರೀಂ ಕೋರ್ಟ್‌ನ ಜಡ್ಜ್‌ರವರ ಗಮನಕ್ಕೆ ಬಂದ ಮೇಲೆ ಚುನಾವಣೆಯ ಮತ ಎಣಿಕೆಯಲ್ಲಿ ತೊಂದರೆಯಾಗಬಹುದೆಂದು ಬ್ಯಾಲೆಟ್ ಬಾಕ್ಸ್‌ನ್ನು ಸುಪ್ರೀಂ ಕೋರ್ಟ್‌ಗೆ ತರಿಸಿಕೊಂಡು ಮತ ಎಣಿಕೆ ಮಾಡಲಾಯಿತು. ಇವತ್ತಿನ ದಿವಸ ಎಂ.ಪಿ. ಮತ್ತು ಎಂ.ಎಲ್.ಎ. ಚುನಾವಣೆಯಲ್ಲಿ ಎಷ್ಟೋ ರಿಸ್‌ಫ್ಯೂಟ್‌ಗಳು ಆಗುತ್ತಿವೆ. ಆದರೆ, ಇಂಥ ಸಂದರ್ಭದಲ್ಲಿ ಮತಗಳ ಎಣಿಕೆ ಯಾವುದೂ ಕೂಡ ಸುಪ್ರೀಂ ಕೋರ್ಟ್‌ನಲ್ಲಿ ನಡೆದಿಲ್ಲ. ಆದರೆ ಒಂದು ಸಹಕಾರ ಸಂಘದ ಚುನಾವಣೆಯ ಮತಗಳು ಸುಪ್ರೀಂ ಕೋರ್ಟ್‌ನಲ್ಲಿ ಎಣಿಕೆ ಆಗಿವೆ ಎಂದರೆ ಎಷ್ಟರಮಟ್ಟಿಗೆ ಇದರ ಪ್ರಾಮುಖ್ಯತೆ ಇತ್ತೆಂಬುದನ್ನು ತಿಳಿದುಕೊಳ್ಳಬಹುದು. ನಂತರ ದಿವಸಗಳಿಂದ ಸೊಸೈಟಿಗೆ ಕೊಡುವಾರದಂಥ ಕಿರುಕುಳ ಕೊಡುವುದಕ್ಕೆ ಪ್ರಾರಂಭವಾಯಿತು. ನಾವು ಮಾಡಿದಂಥ ಕೆಲಸಕ್ಕೆ ವಿರುದ್ಧ ಆಯಿತೆಂದು ಅವರು ನಮ್ಮ ವಿರುದ್ಧ 12 ರಿಟ್ ಪಿಟೀಷನ್ ಬಂದವು. ಆದರೆ 12 ರಿಟ್ ಪಿಟಿಷನ್‌ಗಳೂ ಕೂಡ ನಮ್ಮ ಪರವಾಗಿ ಆಯಿತು. ಇದಾದ ಮೇಲೆ ಎರಡು ಕಂತುಗಳು ಬಿಡುಗಡೆಯಾಯಿತು. ಇದರಿಂದ ಕಟ್ಟಡವನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಲಾಯಿತು. ಹಾಗೆಯೇ ಮೂರು ಕಂತುಗಳಲ್ಲಿ ಯಂತ್ರೋಪಕರಣಗಳನ್ನು ತರಿಸಿಕೊಳ್ಳಲಾಯಿತು. ಅವರೇನು ಆರೋಪಗಳನ್ನು ಮಾಡಿದ್ದಾರೆನ್ನುವ ಪ್ರೊಸೀಡಿಂಗ್ಸ್‌ನ್ನು ನಾನು ತರಿಸಿಕೊಂಡಿದ್ದೇನೆ, ಏನೇನು ಆರೋಪಗಳನ್ನು ಎತ್ತಿದ್ದಾರೆ, ಏನೇನು ವಿಚಾರಗಳನ್ನು ಎತ್ತಿದ್ದಾರೆ, ಈ ಎಲ್ಲಾ ವಿಚಾರಗಳು 1990ನೇ ಇಸವಿಯಲ್ಲಿ ಸೂಪರ್‌ಸೀಡ್ ಮಾಡುವಾಗ, ಅದನ್ನೆ ಇಲ್ಲಿ ಅಡಕವಾಗಿರುವುದು. ಸರ್ಕಾರಕ್ಕೆ 1992ನೇ ಇಸವಿಯಲ್ಲಿ ಕೆಳಕಂಡಂತೆ, 20-12-92, 22-12-92, 24-12-92, 26-12-92, 28-12-92, 30-12-92, 2-1-93, 4-1-93, 6-1-93, 8-1-93, 10-1-93, 15-1-93, ಹೀಗೆ ಅರ್ಜಿಗಳನ್ನು ಕೊಟ್ಟಿದ್ದಾರೆ. ಎಂಎಲ್‌ಸಿ ಆಗುವುದಕ್ಕೆ ಮೊದಲು ಇಷ್ಟು ಅರ್ಜಿಗಳನ್ನು ಸರ್ಕಾರಕ್ಕೆ ಈ ಸೊಸೈಟಿಯ ಮೇಲೆ ಪಿಟಿಷನ್ ಬರೆದಿದ್ದಾರೆ, ಈ ಎಲ್ಲಾ ಪಿಟಿಷನ್‌ಗಳ ಮೇಲೆ ಇಲಾಖಾ ವಿಚಾರಣೆ ನಡೆಸಿ ಇದರಲ್ಲಿ ಏನೂ ಹುರುಳಿಲ್ಲವೆಂದು ಚೀಳಿ ಹಣ ಬಿಡುಗಡೆ ಮಾಡಿದ್ದರಿಂದ ಮಿಷನರಿ ಪರ್ಚೇಸ್ ಮಾಡಿ ಕೆಲಸ ಪ್ರಾರಂಭಿಸಿದ್ದೇವೆ. ಇದು ಸಾಲದೆಂಬಂತೆ ಇವರು ಬಂದ ತಕ್ಷಣ ವಿಧಾನ ಪರಿಷತ್ತಿನಲ್ಲಿ ಪ್ರಶ್ನೆ ಸಂಖ್ಯೆ:731 ಹಾಕಿ, ದಿನಾಂಕ: 8-11-2000 ದಂದು ಅದಕ್ಕೆ ಉತ್ತರ ಬಂದಿದೆ, ಇದಕ್ಕಿಂತ ಹಿಂದೆ ಮಾನ್ಯ ಆತ್ಮಾನಂದರವರು ದಿನಾಂಕ: 4-5-2000 ದಂದು ಪ್ರಶ್ನೆ ಹಾಕಿದ್ದಾರೆ. 1989 ರಿಂದ 1994 ರವರೆಗೆ ಈ ಸೊಸೈಟಿ ಮೇಲೆ ಹಾಕಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಕ್ಕಿದೆ. ಇಲ್ಲಿ ವಿಶೇಷವಾಗಿ ಗಮನಿಸಬೇಕಾದ ಅಂಶ ಏನೆಂದರೆ, 1989 ರಿಂದ ಇಲ್ಲಿಯವರೆಗೆ ವಿಧಾನ ಪರಿಷತ್ತಿನಲ್ಲಾಗಲಿ ಅಥವಾ ವಿಧಾನಸಭೆಯಲ್ಲಾಗಲಿ ಪ್ರಶ್ನೆ ಕೇಳಿದ್ದಕ್ಕೆ ಆ ಪ್ರಶ್ನೆ ಇದು, ರೇಷ್ಮೆ ಕೈಗಾರಿಕಾ ಸಹಕಾರಿ ಸಂಘ ಆಗಿದ್ದರಿಂದ ರೇಷ್ಮೆ ಇಲಾಖೆಗೆ ಹೋಗಿದೆ. ರೇಷ್ಮೆ ಮಂತ್ರಿಗಳು ಇದಕ್ಕೆ ಉತ್ತರಿಸಿದ್ದಾರೆ. ಇದನ್ನು ಸೂಪರ್‌ಸೀಡ್ ಮಾಡಬೇಕೆಂದು ಮಾನ್ಯ ರೇಷ್ಮೆ ಸಚಿವರು ಸಹಕಾರ ಇಲಾಖೆಗೆ ರೆಕ್ಕಂಡ್

ಮಾಡಿದರು. ಇವತ್ತು ಸಹಕಾರ ಸಚಿವರು ಪ್ರಶ್ನೆಯನ್ನು ತನ್ನ ಇಲಾಖೆಗೆ ಹಾಕಿಸಿಕೊಂಡು ಉತ್ತರ ಕೊಡಬೇಕಾದರೆ ಏನೋ ಅನುಮಾನವಿದೆ? ಏಕೆಂದರೆ, ಆ ಸೊಸೈಟಿ ಪ್ರಾರಂಭವಾದಾಗಿನಿಂದ ಸುಮಾರು 7-8 ಪ್ರಶ್ನೆಗಳು ಬಂದಿರಬಹುದು, ಇವೆಲ್ಲಕ್ಕೂ ಕೂಡ ರೇಷ್ಮೆ ಸಚಿವರು ಉತ್ತರಿಸಿರುತ್ತಾರೆ. ಏಕೆಂದರೆ, ಕಡತಗಳು ಅವರ ಹತ್ತಿರ ಇದ್ದು ಈ ಆಡಳಿತ ಮಂಡಳಿ ಅವರಿಗೆ ಸಂಬಂಧಪಟ್ಟಿರುತ್ತದೆ. ಅವರ ಇಲಾಖೆಯ ಅಧಿಕಾರಿಗಳು ಅಲ್ಲಿ ಎಂ.ಡಿ. ಆಗಿದ್ದಾರೆ. ಹೀಗಾಗಿ ಎಲ್ಲಾ ಉತ್ತರ ಅವರೇ ಕೊಟ್ಟಿದ್ದಾರೆ. ಇದರ ಜೊತೆಗೆ ಸರ್ವೋಚ್ಚ ನ್ಯಾಯಾಲಯದ ಆದೇಶದ ನಂತರ 64ರ ತನಿಖೆ ಮಾಡಿಸಿದರು. ಸೂಪರ್‌ಸೀಡ್ ಮಾಡುವಾಗ ಏನು ಆರೋಪಗಳನ್ನು ಮಾಡಿದ್ದಾರೋ ಪುನಃ ಅದನ್ನೇ 64ರ ತನಿಖೆಗೆ ಆದೇಶಿಸಿದರು. ನಾವು ಇದನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಚಾಲೆಂಜ್ ಮಾಡಿದೆವು. ಶ್ರೇಷ್ಠ ನ್ಯಾಯಾಲಯದಲ್ಲಿ ವಿವರವಾದ ತನಿಖೆ ನಡೆಸಿ ಈ ಎಲ್ಲಾ ಆರೋಪಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾಗಿದೆ, ಇನ್ನು ಕೆಲವು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿವೆ, ಇದರಲ್ಲಿ ಯಾವುದೇ ಹುರುಳಿಲ್ಲ, ಆದ್ದರಿಂದ 64ರ ತನಿಖೆ ಮಾಡಿರುವುದು ಸರಿಯಲ್ಲ. ಇದನ್ನು ವಿಥ್‌ಡ್ರಾ ಮಾಡಬೇಕೆಂದು 1998 ರಲ್ಲಿ ವಜಾ ಮಾಡಿದ್ದಾರೆ. ಇದಲ್ಲದೆ 64ರ ತನಿಖೆ ಮಾಡಿಸುವುದರ ಜೊತೆಗೆ, ಇದು ಬಹುಶಃ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏನೆಂದರೆ, 1995 ರಲ್ಲಿ ಲೋಕಾಯುಕ್ತಕ್ಕೆ ಒಂದು ದೂರನ್ನು ಕೊಟ್ಟು ಅದರಲ್ಲಿ ಸುಮಾರು 22 ಆರೋಪಗಳನ್ನು ಮಾಡಿದ್ದಾರೆ. ಇವುಗಳ ಬಗ್ಗೆ ಲೋಕಾಯುಕ್ತದವರು ತನಿಖೆಯನ್ನು ನಡೆಸುತ್ತಿದ್ದಾರೆ. ಸಹಕಾರ ಇಲಾಖೆಗೆ ಕಳುಹಿಸಿದ್ದರು ಇಲ್ಲಿ ಇಲಾಖಾ ವಿಚಾರಣೆ ನಡೆಸುತ್ತಿರುವಾಗಲೇ ನಾವೇ ನಡೆಸುತ್ತೇವೆಂದು ತರುತ್ತಿದ್ದಾರೆ. ಇದರಲ್ಲಿ ಅರ್ಜಿ ಕೊಟ್ಟವರು ಅಲ್ಲಿಯ ಸದಸ್ಯರೊಬ್ಬರು ಇದ್ದಾರೆ. ವಿಧಾನ ಪರಿಷತ್ತಿನಲ್ಲಿ ಏನು ಪ್ರಶ್ನೆ ಹಾಕಿದ್ದಾರೆ, ಯಾವ ವಿಚಾರಗಳನ್ನು ಎತ್ತಿದ್ದಾರೋ ಇದೇ ವಿಚಾರಗಳನ್ನು ಅರ್ಜಿದಾರನಾಗಿ ಲೋಕಾಯುಕ್ತದಲ್ಲಿ ಕೊಟ್ಟಿದ್ದಾರೆ. ಲೋಕಾಯುಕ್ತದಲ್ಲಿ ಕೇಸು ಪೆಂಡಿಂಗ್ ಇರುವಾಗ ಇಲ್ಲಿ ಮೇಲ್ಮನೆಯಲ್ಲಿ ಪ್ರಸ್ತಾಪಿಸಿ ಸಹಕಾರ ಸಚಿವರಿಗೆ ಪ್ರಶ್ನೆ ಹಾಕಿದ್ದಾರೆ. ಅವರ ಕೈಯಲ್ಲಿ ಆಧಾರ ಏನೂ ಇಲ್ಲದೆ ಇವರು ಏತಕ್ಕೆ ಆವೇಶಕ್ಕೆ ಒಳಗಾದರೋ ನನಗೆ ಗೊತ್ತಿಲ್ಲ. ಯಾವ ಉದ್ದೇಶ ಇತ್ತು ಎಂಬುದು ನನಗೆ ಗೊತ್ತಿಲ್ಲ. ಅವರಿಂದ ಯಾವ ಮಾಹಿತಿ ತರಿಸಿಕೊಂಡರೋ ಗೊತ್ತಿಲ್ಲ. ಸದನದಲ್ಲಿ ಏನು ಆರೋಪಗಳನ್ನು ಮಾಡುತ್ತಾರೆ ಅವೆಕ್ಕೆಲ್ಲಾ ತನಿಖೆಯನ್ನು ಮಾಡಿಸುತ್ತೇನೆಂದರು. ಹಳ್ಳಿಯಲ್ಲಿ ಒಂದು ಗಾದೆಯನ್ನು ಹೇಳುತ್ತಾರೆ. ಎತ್ತು ಕರು ಹಾಕಿತು ಎಂದರೆ ಕೊಟ್ಟಿಗೆಗೆ ಕಟ್ಟು ಎನ್ನುವಂತಾಗಿದೆ. ಮಾನ್ಯ ಶ್ರೀ ಶಿವಕುಮಾರ್‌ರವರ ಮೇಲೆ ಏನೂ ಆಧಾರವಿಲ್ಲದೆ ಆರೋಪಿಸಬಹುದು. ಉದಾಹರಣೆಗೆ ಹೇಳುವುದಾದರೆ ರಾತ್ರಿ ಎಲ್ಲಾ ಗಣಿಗಾರಿಕೆ ಮಾಡುತ್ತಿದ್ದು ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆಂದು ಆರೋಪಿಸಿ ಗಣಿ ಮಂತ್ರಿಗಳಿಗೆ ಪ್ರಶ್ನೆ ಹಾಕಬಹುದು. ಆದರೆ ಸಿ.ಓ.ಡಿ. ತನಿಖೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಹತ್ತಿರ ಇದೆ ಎಂದು ಹೇಳಿ, ಅವರು ನಾನು ಹೇಳಿದ ಹಾಗೆ ಕೇಳುತ್ತಾರೆಂದು ತಿಳಿದು ಸಿ.ಓ.ಡಿ. ತನಿಖೆಯನ್ನು ಮಾಡಿ ಎಂದು ಹೇಳಿದರೆ ಹೇಗೆ? ಏಕೆಂದರೆ, ಸಿ.ಓ.ಡಿ. ತನಿಖೆ ಮಾಡುವ ಅಧಿಕಾರ ಅವರಿಗಿದೆ. ಆದೇರೀತಿ ಸಹಕಾರ ಸಚಿವರಿಗೆ ಸೂಪರ್‌ಸೀಡ್ ಮಾಡುವ ಅಧಿಕಾರ ಕಾಯಿದೆ ಪ್ರಕಾರ ಇದೆ. ಸಂಬಂಧಪಟ್ಟ ಮಂತ್ರಿಗಳನ್ನು ಬೈಪಾಸ್ ಮಾಡಿ ಕಾಯಿದೆ ಯಾರ ಹತ್ತಿರ ಇದೆ. ಆಡಳಿತ ಯಾರ ಹತ್ತಿರ ಇದೆ, ಅವರಿಗೆ ಕೊಟ್ಟು ತಾವು ಉತ್ತರ

ತೆಗೆದುಕೊಂಡರೆ ಅವರ ಮನಸ್ಸಿಗೆ ಏನು ಆಗಬಹುದು. ಮಾನ್ಯ ಮುನಿಯಪ್ಪನವರು ಹೇಳಿದ ಹಾಗೆ ನಾನು ಕೇಳುವುದಿಲ್ಲವೆಂದು ತಿಳಿದುಕೊಂಡು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ನಾನು ಇಬ್ಬರು ಚೆನ್ನಾಗಿದ್ದೇವೆ, ಅವರು ಹೇಳಿದರೆ ಇವರು ಕೇಳುತ್ತಾರೆಂದು ಅವರ ಕೈಯಲ್ಲಿ ಆದೇಶಿಸಿದರೆ ಹೇಗೆ? ಲೋಕಾಯುಕ್ತದವರು quasi-judicial ಬಾಡಿ ಆಗಿರುವುದರಿಂದ ಅವರು ಯಾವ ರೀತಿ ತೀರ್ಮಾನವನ್ನು ಕೊಡುತ್ತಾರೋ ಅದು ಬೇರೆ ಪ್ರಶ್ನೆ. ಅಲ್ಲಿ ಆರೋಪವನ್ನು ಮಾಡಿ ಅಲ್ಲಿ ವಿಚಾರಣೆ ಪೆಂಡಿಂಗ್ ಇರುವಾಗ ಅದೇ ಪ್ರಶ್ನೆ ಮೇಲ್ಮನೆಯಲ್ಲಿ ಬಂದು ಅದೇ ವಿಚಾರಗಳನ್ನು ಎತ್ತಿ ನನ್ನ ಹೆಸರು ಹೇಳಿ ಅಷ್ಟು ಭ್ರಷ್ಟಾಚಾರವಾಗಿದೆ, ಇಷ್ಟೊಂದು ಅವ್ಯವಹಾರಗಳು ಆಗಿವೆ ಎಂದು ಆರೋಪಿಸಿ ನಮ್ಮ ಹೆಸರನ್ನು ಪತ್ರಿಕೆಗಳಲ್ಲಿ ಬರುವಂತೆ ಮಾಡಿರುವುದರಿಂದ ನನಗೆ ಬಹಳ ನೋವಾಗಿದೆ. ಇದು ಒಬ್ಬ ಸದಸ್ಯರ ಗೌರವದ ಪ್ರಶ್ನೆ. ಒಬ್ಬ ಮಂತ್ರಿಗಳಾಗಲಿ ಸದಸ್ಯರಾಗಲಿ ಅವರ ಬೇಕು ಬೇಡಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಅವರ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಯಾರೂ ಈ ಸದನವನ್ನು ಉಪಯೋಗಿಸಿಕೊಳ್ಳಬಾರದು. ಇದಕ್ಕೆ ಒಂದು ಪ್ರೊಪ್ರೈಟಿ ಇದೆ. ಇದಕ್ಕೊಂದು ನೀತಿ ನಿಯಮ ಇದೆ. ಪ್ರತಿಯೊಬ್ಬ ಸದನದ ಸದಸ್ಯನಿಗೆ ಗೌರವವಿದೆ. ನನ್ನ ಹೆಸರು ಹೇಳಿ ನನಗೆ ಅವಮಾನ ಮಾಡಿದ್ದಾರೆ. ಈ ಸೊಸೈಟಿಯ ಅಧ್ಯಕ್ಷನಾದ ಮೇಲೆ ಒಂದು ರೂಪಾಯಿ ಸಂಬಳವನ್ನು ತೆಗೆದುಕೊಂಡಿಲ್ಲ. ಟಿಎ, ಡಿಎ ತೆಗೆದುಕೊಂಡಿಲ್ಲ, ಅಷ್ಟೊಂದು ಪ್ರಾಮಾಣಿಕವಾಗಿ ಏಕೆ ಕೆಲಸವನ್ನು ಮಾಡಿದೆನೆಂದರೆ, ಇದು ದುರ್ಬಲ ವರ್ಗದವರಿಗೆ ಸೇರಿದ ಸೊಸೈಟಿ ಇದರಲ್ಲಿ ಬಡವರಿದ್ದಾರೆ. ಇದಕ್ಕೆ ಏನಾದರೊಂದು ಉದ್ಯೋಗವನ್ನು ಕಲ್ಪಿಸಿಕೊಡಬೇಕೆಂದು ಪ್ರಯತ್ನ ಮಾಡಿದರೂ ಸುಮಾರು 15 ವರ್ಷಗಳಿಂದ ಇದೆ ರೀತಿ ಕಿರುಕುಳ ಕೊಟ್ಟು ಅರ್ಥದಲ್ಲಿ ನಿಲ್ಲಿಸಿದ್ದಾರೆ. 1997 ರಿಂದ ಇದಕ್ಕೆ ಮೂರನೇ ಕಂತಿನ ಹಣ ಬಿಡುಗಡೆ ಮಾಡಿಲ್ಲ. ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಡದಿದ್ದರೂ ತಾವೇ ತರಿಸಿಕೊಂಡು ಮಾಡಿರುವುದು ಸರಿಯೇ? ಸೂಪರ್‌ಸೀಡ್ ಮಾಡುವುದಕ್ಕೆ ಅಧಿಕಾರ ಇದೆ. ಏಕೆಂದರೆ ಕಾಯಿದೆ ಅವರ ಕೈಯಲ್ಲಿದೆ. ಆದರೇ ತಾನೆ ಕಡತವನ್ನು ತರಿಸಿಕೊಂಡು ಅವರು ಏನು ಹೇಳುತ್ತಾರೆ ಅದನ್ನು ಕೇಳಿ, ಆಯಿತು ನಾನು ಸಿ.ಓ.ಡಿ. ತನಿಖೆ ಮಾಡಿಸುತ್ತೇನೆಂದರೆ ಹೇಗೆ? ಇದನ್ನು ಯಾವಾಗ ಮಾಡಿಸುತ್ತಾರೆ? ಲೋಕಾಯುಕ್ತದಲ್ಲಿ ತನಿಖೆ ಪೆಂಡಿಂಗ್ ಇರುವಾಗ ಸಿಓಡಿ ತನಿಖೆ ಮಾಡುವುದಕ್ಕಾಗುತ್ತದೆಯೇ? There are established facts. When an enquiry is already there, another enquiry connot be held. On what basis enquiry is held? Has he submitted any application to you? Has he made any specific charges with documentary evidence? ಏಕೆ ಮಾಡಿದಿರಿ? ಒಬ್ಬ ಮನುಷ್ಯನಿಗೆ ಕಿರುಕುಳವನ್ನು ಕೊಡಬೇಕಾದರೂ ಹಾಗೂ ವಿಚಾರಣೆ ಮಾಡಬೇಕಾದರೂ ಇತಿಮಿತಿಗಳು ಇವೆ. ನಾನು ಎಷ್ಟೊಂದು ವಿಚಾರಣೆಗಳನ್ನು ಎದುರಿಸುವುದು. ಎಷ್ಟು ಸಾರಿ ನಾನು ರಾಜೀನಾಮೆ ಕೊಡಬೇಕು. ನಾನು ಏನಾದರೂ ತಪ್ಪು ಮಾಡಿದರೆ ಇವತ್ತು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಎಷ್ಟೋ ಸಲ ಈ ರೀತಿಯಾಗಿ ನಾನು ಮಾಡಿದ್ದೇನೆ. ಅನಾವಶ್ಯಕವಾಗಿ ಯಾವುದೋ ಒಂದು ದ್ವೇಷದಿಂದ ಯಾವುದೋ ವೈಯಕ್ತಿಕ ಬೇಕು ಬೇಡಗಳಿಂದ ಒಬ್ಬ ಸದಸ್ಯನನ್ನು ಇಷ್ಟೊಂದು ಅಗೌರವವಾಗಿ ನಡೆಸಿರುವುದು ಹಾಗೂ ಮಾನಮರ್ಯಾದೆಯನ್ನು ಕಳೆದಿರುವುದು ಸರಿಯಲ್ಲ. ಅದಕ್ಕೆ ತಾವು ಉತ್ತರವನ್ನು ಕೊಡಬೇಕು, ಇನ್ನೊಂದರ ಬಗ್ಗೆ ನಾನು

ಕೇಳುತ್ತೇನೆ, ಈ ತರಹ ಲೋಕಸಭೆಯಲ್ಲಿ ಒಂದು ನಿದರ್ಶನಗಳಾಗಿವೆ, 1970ನೇ ಇಸವಿಯಲ್ಲಿ ರಾಜ್ಯಸಭೆಯ ಒಬ್ಬ ಸದಸ್ಯರು ಲೋಕಸಭೆ ಸದಸ್ಯನ ಮೇಲೆ ಆರೋಪವನ್ನು ಮಾಡಿದಾಗ ಲೋಕಸಭೆಯ ಅಧ್ಯಕ್ಷರು ಇದು ಮಾಡಿರತಕ್ಕದ್ದು ತಪ್ಪು ಎಂದು ಒಪ್ಪಿಕೊಂಡು, ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ರೀತಿಯಾಗಿ ಪತ್ರವನ್ನು ಬರೆದಿದ್ದಾರೆ. On March 30th 1970 during the course of the debate in the Rajyasabha a member of that House made Certain allegations against a member of the Lok Sabha. After some discussions in the House, the Speaker addressed a letter to the chairman of the Rajya Sabha inviting his attention to the matter and observed, inter-alia, as follows:

> " You will agree that it is not desirable for a member of one House to make allegations or cast aspersions on the floor of the House on the members of the other House."

ಎಂದು ಅವರು ಬರೆದಿದ್ದಾರೆ, ನಾನು ಸಭಾಧ್ಯಕ್ಷರನ್ನು ಕೇಳಿಕೊಳ್ಳುವುದೇನೆಂದರೆ, ಅವರು ಉದ್ದೇಶಪೂರ್ವಕವಾಗಿ 10-12 ಅಲಿಗೇಷನ್ಸ್‌ಗಳನ್ನು ಮಾಡಿರುವುದಲ್ಲದೆ ಲೋಕಾಯುಕ್ತದಲ್ಲಿ ಅವರ ಅರ್ಜಿಯು ಪೆಂಡಿಂಗ್ ಇದ್ದಾಗ ಸದಸ್ಯತ್ವವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಮಂತ್ರಿಗಳು ಉತ್ತರವನ್ನು ಕೊಟ್ಟಿರುವುದು ಸಂಶಯಾಸ್ಪದವಾಗಿದೆ, ಆದರ ಸರಿಯಾದಂತಹ ಸಮಜಾಯಿಷಿಯನ್ನು ಹೇಳಬೇಕು. ಆ ಸದಸ್ಯರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಶಾವು ಪತ್ರವನ್ನು ಬರೆಯಬೇಕೆಂದು ಹೇಳುತ್ತಾ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಮಾನ್ಯ ಭೀರ್ಮನ್‌ರವರೆ, ನನ್ನ ಮಿತ್ರರಾದಂತಹ ಸೋಮಶೇಖರ್‌ರವರ ಮಾದವನ್ನು ಕೇಳಿ, ಅವರ ನೋವು ಮತ್ತು ಭಾವನೆಯನ್ನು ನೋಡಿ ನನಗೆ ಏನು ಹೇಳಬೇಕೆಂದು ಅರ್ಥವಾಗುತ್ತಿಲ್ಲ. ಮಾನ್ಯ ಸೋಮಶೇಖರ್‌ರವರು ನನ್ನ ಪಕ್ಕದ ಕ್ಷೇತ್ರದವರಾಗಿದ್ದಾರೆ, ಅವರು ತಮ್ಮ ಊರಿಗೆ ಹೋಗಬೇಕಾದರೆ ನಾತನೂರು ಮಾರ್ಗವಾಗಿಯೇ ಹೋಗಬೇಕು. ಶ್ರೀ ಬಸವಲಿಂಗಪ್ಪನವರು ನಿಧನರಾದ ಮೇಲೆ ಯಾರಾದರೊಬ್ಬರು ಆ ಸ್ಥಾನವನ್ನು ಪಡೆಯುತ್ತಾರೆಂದರೆ, ನಾನು ಮಾನ್ಯ ಸೋಮಶೇಖರ್‌ರವರು ಪಡೆಯುತ್ತಾರೆಂದು ನನ್ನ ವೈಯಕ್ತಿಕ ಅಭಿಪ್ರಾಯದಿಂದ ತಿಳಿದುಕೊಂಡಿದ್ದೇನೆ. ನಾನು ಸೋಮಶೇಖರ್‌ರವರ ಬಗ್ಗೆ ಅಷ್ಟು ವ್ಯಕ್ತಿತ್ವವನ್ನು ತಿಳಿದುಕೊಂಡಿರುವವರಲ್ಲಿ ಒಬ್ಬನಾಗಿದ್ದೇನೆ. ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕಾಫಿ ಪ್ರಕರಣದಲ್ಲಿ ಕೊಟ್ಟಂತಹ ಸಂದರ್ಭದಲ್ಲಿ ಅವರಿಗೆ ಮತ್ತು ಅವರ ಮನೆಯವರಿಗೆ ಎಷ್ಟು ವ್ಯಥೆಯಾಯಿತೋ ಅದಕ್ಕಿಂತ ಹೆಚ್ಚು ನನಗೆ ವ್ಯಥೆಯಾಯಿತು. ಏಕೆಂದರೆ ಅಷ್ಟು ಪ್ರಾಮಾಣಿಕತೆಯಿಂದ ಅವರು ನಡೆದುಕೊಂಡಿದ್ದಾರೆ. ರಾಜಕಾರಣದ ಬಗ್ಗೆ ನನಗೆ ಗೊತ್ತಿತ್ತು, ದಳದಲ್ಲೂ ಏನು ರಾಜಕಾರಣ ನಡೆಯುತ್ತಿತ್ತು, ಅವರನ್ನು ಯಾವ ರೀತಿ ದೂರವಿಡಬೇಕು, ಏನೇನೋ ಇಂಟರನಲ್ ಪಾಲಿಟಿಕ್ಸ್, ಅದು ಎಲ್ಲಾ ಪಕ್ಷಗಳಲ್ಲಿರುವಂತಹ ವಿಚಾರವಾಗಿದೆ. ಅವರಿಗೆ ಕಾಂಪ್ರಮೈಸ್ ಮಾಡಿಕೊಳ್ಳಿ ಎಂದು ಕರೆಯುವಂತಹ

ಸಂದರ್ಭದಲ್ಲಿ ಅವರು ಕಾಂಪ್ರಮೈಸ್‌ನ್ನು ಮಾಡಿಕೊಳ್ಳಲಿಲ್ಲ. ಅವರು ಆಷ್ಟೊಂದು ಹೋರಾಟವನ್ನು ಮಾಡಿ ಕೊನೆಗೆ ಮುಕ್ತರಾಗಿ ಅವರು ಮತ್ತೆ ಅಧಿಕಾರವನ್ನು ಪಡೆದುಕೊಂಡರು. ಅವರಲ್ಲಿ ಇದ್ದಂತಹ ನಿಯತ್ತಿಗೆ ಭಗವಂತನು ಅವರಿಗೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದಾನೆ. ಅಷ್ಟು ಒಂದು ಗೌರವವನ್ನು ಉಳಿಸಿಕೊಂಡಿದ್ದಾರೆ. ಅವತ್ತಿನದಿವಸ ಅವರು ರಾಜೀನಾಮೆಯನ್ನು ಕೊಟ್ಟ ದಿವಸ ನಾನು ಅವರ ಮನೆಗೆ ಹೋಗಿ ನನ್ನ ಕೈಯಲ್ಲಿ ಏನು ಅಧಿಕಾರವನ್ನು ಕೊಡುವುದಕ್ಕೆ ಆಗದಿದ್ದರೂ ಮಾನಸಿಕವಾದಂತಹ ಧೈರ್ಯವನ್ನು ಕೊಟ್ಟು ಬರಬೇಕೆನ್ನುವ ದೃಷ್ಟಿಯಿಂದ ನನ್ನ ಪಕ್ಕದ ಕ್ಷೇತ್ರದ ಸ್ನೇಹಿತರಿಗೆ ಕೊಡಬೇಕು ಎಂದು ಹೇಳಿ ಬಂದಿದ್ದೇನೆ. ನನಗೆ ಅಷ್ಟು ಅಭಿಮಾನ ಮಾನ್ಯ ಸೋಮಶೇಖರ್‌ರವರ ಮೇಲೆ ಇದೆ, ಇವತ್ತು ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಬಹಳ ಆವೇಶದಿಂದ ಮಾತನಾಡುತ್ತಿದ್ದಾರೆ, ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನನಗೆ ಯಾರಿಗೂ ತೊಂದರೆ ಮಾಡಬೇಕು, ಮನಸ್ಸನ್ನು ನೋಯಿಸಬೇಕು, ಚಿತ್ರಹಿಂಸೆ ಮಾಡಬೇಕೆಂದು ಇಲ್ಲ, ಮಹಾಭಾರತದಲ್ಲಿ ಭೀಷ್ಮನು ಧರ್ಮರಾಯನಿಗೆ ಒಂದು ಮಾತನ್ನು ಹೇಳುತ್ತಾನೆ. "ಋಣೈ ಚತ್ರಭ್ಯು ಸಂಯುಕ್ತಾ, ಜಾಯಿಂತೆ ಮಾನವ ಋಷಿ, ಪಿತೃದೇವರ್ಷಿ ಮನುಜೆ ತೇಯಂ ದೇಹಿಶ್ಯ ಧರ್ಮತಾ" ಅಂದರೆ ಮನುಷ್ಯನು ಹುಟ್ಟುವಾಗ ಋಣಗಳಿಂದ ಹುಟ್ಟುತ್ತಾನಂತೆ, ತಂದೆತಾಯಿಯ ಋಣ, ಋಷಿಗಳ ಋಣ, ಗುರುಗಳ ಋಣ, ಸ್ನೇಹಿತರ ಋಣ, ಸಮಾಜದ ಋಣ, ಈ ಎಲ್ಲಾ ಋಣಗಳನ್ನು ಸರಿಯಾದ ರೀತಿಯಲ್ಲಿ ಧರ್ಮದಿಂದ ತೀರಿಸಬೇಕಂತೆ, ಶ್ರೀ ಸೋಮಶೇಖರ್‌ರವರು ನಾನು ಸ್ಪರ್ಧಿಸಿದಾಗ ಚುನಾವಣೆಯಲ್ಲಿಯೂ ಕೂಡ ನನಗೆ ಸಹಾಯವಾಗಬೇಕು ಶಿವಕುಮಾರ್‌ರವರು ಗೆಲ್ಲಬೇಕೆಂದು ಬಯಸಿದಂತವರಲ್ಲಿ ಒಬ್ಬರಾಗಿದ್ದಾರೆ. ಅಂತವರಿಗೆ ನಾನು ಮನಸ್ಸು ನೋಯಿಸುವಂತಹವನಲ್ಲ. ಮಾನ್ಯ ಸೋಮಶೇಖರ್‌ರವರೇ.

ಶ್ರೀ ಬಿ. ಸೋಮಶೇಖರ್ : ನನ್ನನ್ನು ಕರೆದುಕೊಂಡು ಹೋಗಿ ಇಂದ್ರ-ಚಂದ್ರನೆಂದು ಹೊಗಳಿದ್ದೀರಿ, ಅದಲ್ಲವನ್ನೂ ಮಾಡಿರುವರು ಪತಕ್ಕಾಗಿ ಇದನ್ನು ಮಾಡಲಿಲ್ಲ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಅದನ್ನು ನಾನು ಹೇಳುತ್ತಿದ್ದೇನೆ. ತಾವು ದಯವಿಟ್ಟು ಸುಮ್ಮನಿರಬೇಕು, ತಾವು ನಾನು ಹೇಳುವ ಮಾತನ್ನು ಕೇಳಬೇಕು. ತಾವು ತಾಳ್ಮೆಯಿಂದ ಇರಬೇಕೆಂದು ಕೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಕೊಶ್ಚನ್ ಬಂತು, ಅದು ಸಿರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಹೋಯಿತು, ಮಾನ್ಯ ರೇಷ್ಮೆ ಸಚಿವರು ಉತ್ತರವನ್ನು ಕೊಡಲಿ ಎಂದು ನಾನು ಸುಮ್ಮನಿದ್ದೆ, ಅಲ್ಲಿ ಇದರ ಬಗ್ಗೆ ಗಲಾಟೆಯಾಗಿ ಇದು ರೇಷ್ಮೆ ಮಂತ್ರಿಗಳಿಗೆ ಸಂಬಂಧವಿಲ್ಲ, ಇದು ಸಹಕಾರ ಇಲಾಖೆಗೆ ಸಂಬಂಧಪಟ್ಟಿದ್ದು, ಸಹಕಾರ ಇಲಾಖೆಯಲ್ಲಿ ರಿಜಿಸ್ಟರ್ ಆಗಿದೆ, ಇದನ್ನು ಅವರೇ ಮಾಡಬೇಕೆಂದು ಹೇಳಿ ಇದನ್ನು ಕೊನೆಗೆ ನನ್ನ ಇಲಾಖೆಗೆ ವರ್ಗಾಯಿಸಿದರು. ಹೀಗೆ ವರ್ಗಾಯಿಸಿದ ನಂತರ ನಾನು ರಿಪ್ಲೈ ಕೊಡುವುದರ ಬಗ್ಗೆ ನನ್ನ ಸ್ನೇಹಿತರನ್ನು ಕೇಳಿದೆ, ಏನು ಈ ರೀತಿಯಾಗಿ ಬಂದಿದೆಯಲ್ಲಾ, ಇದರ ಬಗ್ಗೆ ಏನು ಸಮಾಚಾರ, ಎಂದು ಕೇಳಿದೆ. ಇದರ ಬಗ್ಗೆ ಬೇಕಾದಷ್ಟು ಎನ್‌ಕ್ವಯರಿಯಾಗಲಿ ಶಿವಕುಮಾರ್, ನಾನು ಬಹಳ ಪ್ರಾಮಾಣಿಕತೆಯಿಂದ ಇದ್ದೇನೆ, ಇದರಲ್ಲಿ ನನ್ನದೇನೂ ಸಮಸ್ಯೆಯಿಲ್ಲ ನೀವು ಹೋಗಿ ಮಾಡಿಕೊಳ್ಳಿ ಎಂದರು.

ಶ್ರೀ ಬಿ. ಸೋಮಶೇಖರ್ : ಇದು ನಿಮಗೆ ಸಂಬಂಧಪಟ್ಟಿದ್ದಲ್ಲ, ಇದು ಸಂಬಂಧಪಟ್ಟಿರುವುದು ರೇಷ್ಮೆ ಮಂತ್ರಿಗಳಿಗೆ.

ಶ್ರೀ ಡಿ.ಕೆ. ಶಿವಕುಮಾರ್ : ಕೋ-ಆಪರೇಟೀವ್ ಸೊಸೈಟಿ ಅಲ್ಲಿ ರಿಜಿಸ್ಟ್ರರ್ ಆಗಿರುವಂತಹ ಸಂದರ್ಭದಲ್ಲಿ ಅದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಹಾಗಾದರೆ ಇಲ್ಲಿ 2-5 ಪ್ರಶ್ನೆಗಳು ಏತಕ್ಕಾಗಿ ನಿಮ್ಮ ಕನ್ಸಿಡರೇಷನ್‌ಗೆ ಹೋಗಲಿಲ್ಲ. ಇದೊಂದೇ ಪ್ರಶ್ನೆ ಏತಕ್ಕಾಗಿ ಹೋಯಿತು?

ಶ್ರೀ ಡಿ.ಕೆ. ಶಿವಕುಮಾರ್ : ಕೋ-ಆಪರೇಷನ್ ಆಕ್ಟ್‌ನಲ್ಲಿ ರಿಜಿಸ್ಟ್ರೇಷನ್ ಆಗಿದ್ದಂತಹ ಸಂದರ್ಭದಲ್ಲಿ ಅದು ಅಲ್ಲಿಗೆ ಹೋಯಿತೋ, ಇಲ್ಲಿಗೆ ಹೋಯಿತೋ ಅದನ್ನು ಸರ್ಕಾರಕ್ಕೆ ವಹಿಸುತ್ತಾರೆ. ಅದನ್ನು ನಾನು ಬೇಕೆಂದು ತೆಗೆದುಕೊಂಡೆನೋ, ನನಗೆ ಆ ಅರ್ಹತೆ ಇತ್ತೋ ನಾನು ಅದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ಹೇಳಿ ಬಹುಶಃ ಅದು ನಿಮಗೆ ಆಗಲಿಲ್ಲವೆಂದರೆ, ಬೇಕಾದರೆ ನಿಮ್ಮ ಭಾಗದಲ್ಲಿ ಹಿಂದೆ ಕೋ-ಆಪರೇಷನ್ ಸಚಿವರಾದಂತವರು ಇದ್ದಾರೆ, ಅವರನ್ನಾದರೂ ಕೇಳಿ, ಇಲ್ಲದಿದ್ದರೆ ಹಿಂದೆ ಸಹಕಾರಿ ಮಂತ್ರಿಗಳಾಗಿದ್ದವರು ನಮ್ಮ ಪಕ್ಷದಲ್ಲಿಯೂ ಇದ್ದಾರೆ ಇವರಾದರೂ ಇದರ ಬಗ್ಗೆ ಹೇಳಲಿ, ಇಲ್ಲವೆಂದರೆ ಅಧ್ಯಕ್ಷರು ಇದ್ದಾರೆ ಅವರು ಸರಿಯಾದ ರೀತಿಯಲ್ಲಿ ನಮ್ಮ ಅಧಿಕಾರಿಗಳ ಜೊತೆಯಲ್ಲಿ ಇದರ ಬಗ್ಗೆ ಚರ್ಚೆಯನ್ನು ಮಾಡಿ, ಅದನ್ನು ಯಾರು ಮಾಡಬೇಕೆಂದು ಅವರು ಹೇಳುತ್ತಾರೆ. ನನಗೆ ಆ ಬಗ್ಗೆ ಪ್ರಶ್ನೆ ಬಂತು, ಅದು ಬಂದ ನಂತರ ಅದರ ಬಗ್ಗೆ ಬಹಳ ದೊಡ್ಡ ಚರ್ಚೆಯಾಯಿತು, ಅಲ್ಲಿ ಚರ್ಚೆ ನಡೆದಂತಹ ಸಂದರ್ಭದಲ್ಲಿ ಹೌಸ್ ಕಮಿಟಿ ಮತ್ತೊಂದು ಎಂಬ ವಿಚಾರ ಬಂತು, ಆ ಬಗ್ಗೆ ಬಹಳಷ್ಟು ಆರೋಪಗಳನ್ನು ಮಾಡಿದರು, ಇದು ದಿನಾಂಕ: 29-03-1983 ರಲ್ಲಿ ಸ್ಥಾಪನೆಯಾದಂತಹ ಸಂಸ್ಥೆಯಾಗಿದೆ. 1984 ರಲ್ಲಿ ಆಡಳಿತ ಮಂಡಳಿಯು ಸ್ಥಾಪನೆಯಾಯಿತು. ಇದು ಪ್ರಾರಂಭವಾಗಿ ಸುಮಾರು 17 ವರ್ಷವಾಯಿತು. ಇಲ್ಲಿ ನಮ್ಮ ಸ್ನೇಹಿತರು 13 ವರ್ಷಗಳ ಕಾಲ ಅಧ್ಯಕ್ಷರಾಗಿದ್ದಾರೆ, ಹಿಂದೆ ಅಲ್ಲಿ ಮಾಜಿ ಕಂದಾಯ ಸಚಿವರು ಇದ್ದರು, ಏನು ತಾವು ಮಾಜಿ ರೆವಿನ್ಯೂ ಮಿನಿಸ್ಟರ್ ಎಂದು ಹೇಳುತ್ತೀರಾ, ಶ್ರೀ ವಿ.ಎಲ್. ಪಾಟೀಲ್, ಶ್ರೀ ಜಾಲಪ್ಪ, ಯಾರು ಮಾಜಿ ಮಂತ್ರಿಗಳು ಎಂದು ಸ್ವಲ್ಪ ಅಲ್ಲಿ ಗಲಾಟೆಯಾಯಿತು. ಆಗ ಈ ಹೆಸರು ಬಂತು, ಇದಾದ ನಂತರ ಹೌಸ್ ಕಮಿಟಿಯಾಗಬೇಕು, ಈ ಬಗ್ಗೆ ಬೇಕಾದಷ್ಟು ಆರೋಪಗಳು ಬಂತು, ಆದರೆ ಮಾನ್ಯ ಸದಸ್ಯರಾದ ಶ್ರೀ ಸೋಮಶೇಖರ್‌ರವರು ಈ ವಿಚಾರದ ಬಗ್ಗೆ ಬಹಳಷ್ಟು ದೀರ್ಘವಾಗಿ ಹೋಗಿರುವಂತಹ ಸಂದರ್ಭದಲ್ಲಿ ನಾನು ಈ ಬಗ್ಗೆ ಬಹಳ ಡಿಟೇಲ್ ಆಗಿ ಸ್ಟೇಟ್‌ಮೆಂಟ್‌ನ್ನು ಮಾಡಬೇಕೆಂದು ಬಯಸುತ್ತೇನೆ. ಆದರೆ ಎನ್.ಸಿ.ಡಿ.ಸಿ.ಯವರು ಲೋನ್ ಸ್ಯಾಂಕ್ಷನ್ ಮಾಡಿದ್ದಾರೆ, ಈ ಬಗ್ಗೆ 1983 ರಲ್ಲಿ ಪ್ರಕ್ರಿಯೆಯಾಗಿದ್ದು ಇವತ್ತಿನವರೆವಿಗೂ ಆ ಪ್ರಕ್ರಿಯೆಯೂ ಪ್ರಾರಂಭವಾಗಲಿಲ್ಲ, ಈ ಬಗ್ಗೆ 90 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂಬುದರ ಬಗ್ಗೆ ವರದಿಯಲ್ಲಿದೆ, ಈ ಬಗ್ಗೆ ಲೋಕಾಯುಕ್ತ, ಹೈಕೋರ್ಟ್, ಸುಪ್ರೀಂಕೋರ್ಟ್ ಮತ್ತೊಂದು ಬೇಕಾದಷ್ಟು ಇದರ ಬಗ್ಗೆ ಹೇಳಿದರು. ಈ ಬಗ್ಗೆ ರೆಕಾರ್ಡ್ಸ್‌ನ್ನು ಸ್ಟೈಟ್ ಮಾಡುವುದಕ್ಕೆ ಅವರು ಏತಕ್ಕಾಗಿ ಇದನ್ನು ಈ ವಿಚಾರವನ್ನು ಪ್ರಸ್ತಾಪ ಮಾಡಿ ಇದನ್ನು ಮೇಲಕ್ಕೆ ಹಾಕಿಕೊಳ್ಳುತ್ತಿದ್ದಾರೋ, ಇಲ್ಲವೆಂದರೆ ನಮ್ಮ ಮೇಲೆ ಹಾಕುವುದಕ್ಕೆ ಪ್ರಯತ್ನ ಪಡುತ್ತಿದ್ದಾರೋ ಪಾಪ ಅವರಿಗೆ ಗೊತ್ತಿಲ್ಲ. ಅವರು ರಕ್ಷಣೆಯನ್ನು

ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ, ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಈ ಬಗ್ಗೆ ಡೀಟೈಲ್ಡ್ ಸ್ಟೇಟ್‌ಮೆಂಟ್‌ನ್ನು ನಾಳೆ ನಾನು ಈ ಸಂದರ್ಭದಲ್ಲಿ ಸದನದಲ್ಲಿ ಮಾಡುತ್ತೇನೆ. ಆದರೆ ಒಂದು ವಿಷಯವನ್ನು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಅವಕಾಶದಲ್ಲಿ ನನ್ನಲ್ಲಾದರೂ ತಪ್ಪಿದೆಯೋ ಅಥವಾ ಯಾವ ಸದಸ್ಯರ ಮೇಲೆ ತಪ್ಪಿದೆಯೋ ಎಂಬುದು ನನಗೆ ಗೊತ್ತಿರುವುದಿಲ್ಲ. ತಮಗೇನಾದರೂ ಗೊತ್ತಿದ್ದರೆ, ಈ ಬಗ್ಗೆ ಯಾವುದಾದರೂ ಸೆಕ್ಷನ್ ಇದ್ದರೆ ನಿಮ್ಮ ರಕ್ಷಣೆಗೆ ಬರುವಂತಹ ಹಕ್ಕುಬಾಧ್ಯತಾ ಮತ್ತೊಂದು ಯಾವುದಾದರೂ ಇದ್ದರೆ ನೀವು You can ask for any enquiry. I am ready to face that enquiry. ನಿಮಗೆ ಒಳ್ಳೆಯದಾಗಲಿ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ ನನ್ನಲ್ಲಿ ಯಾವುದೇ ಕಲ್ಮಶವಿಲ್ಲ, ಯಾರಿಗೂ ತೊಂದರೆಯನ್ನು ಕೊಡಬೇಕೆಂದು ಇಲ್ಲ. ಅಷ್ಟು ತೊಂದರೆಯನ್ನು ಕೊಡಬೇಕೆಂದರೆ, 20 ಸಾವಿರ ಸೊಸೈಟಿಗಳು ಇದೆ, ಬೇಕಾದಷ್ಟು ಜನ ವಿರೋಧಪಕ್ಷದವರು ಇರತಕ್ಕ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡುವಂತಹ ಅವಕಾಶವಿತ್ತು. ಇವತ್ತಿನವರೆವಿಗೂ ನಾನು ಒಂದು ಸೊಸೈಟಿಯನ್ನೂ ಸೂಪರ್‌ಸೀಡ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ. ಏನಾದರೂ ತೊಂದರೆಗಳಿದ್ದರೆ, ನಾನು ನೇರವಾಗಿ ಹೇಳಿದ್ದೇನೆಯೇ ಹೊರತು ಸಣ್ಣ ಪುಟ್ಟ ವೈಯಕ್ತಿಕ ತೊಂದರೆಗಳನ್ನು ಮಾಡುವವನಲ್ಲ. ಈ ಒಂದು ವ್ಯವಸ್ಥೆ ಏನು ಇದೆ, ಅದು ಸರಿಯಾಗಿ ಸೆಟರೇಟ್ ಆಗಬೇಕೆನ್ನುವ ಆಸೆಯೇ ಹೊರತು ಇದರಲ್ಲಿ ನಾನು ಯಾರಿಗೂ ತೊಂದರೆಯನ್ನು ಕೊಡುವಂತಹ ಪ್ರಶ್ನೆಯೇ ಇಲ್ಲ. ಭಗವಂತನು ನನಗೆ ಅವಕಾಶವನ್ನು ಕೊಟ್ಟಿದ್ದಾನೆ, ಮುಂದಕ್ಕೆ ಜಟಕಾಬಂಡಿ ಹೋಗುವುದಕ್ಕೆ ಬಹಳಷ್ಟು ದಾರಿಗಳಿವೆ, ಆ ದಾರಿಯ ಬಗ್ಗೆ ನಾವು ಚಿಂತನೆಯನ್ನು ಮಾಡುವಂತಹ ಜನವೇ ಹೊರತು, ಮಾನ್ಯ ಸೋಮಶೇಖರ್‌ರವರೇ ನಾವು ಸಮುದ್ರದಲ್ಲೇ ಬೇಕಾದರೆ ಈಜೋಣ, ನಾಳೆ ನಾನು ಇದರ ಬಗ್ಗೆ ಉತ್ತರವನ್ನು ಕೊಡುತ್ತೇನೆ, ನಮಸ್ಕಾರ.

ಶ್ರೀ ಉಮೇಶ್ ವಿ. ಕತ್ತಿ : ರಾಯಭಾಗ್ ಸಕ್ಕರೆ ಕಾರ್ಖಾನೆಯ ಬಗ್ಗೆ ತಾವು ಉತ್ತರವನ್ನು ಕೊಡುತ್ತೀರೆಂದು ಹೇಳಿದ್ದೀರಿ, ಇದಕ್ಕೆ ಸಂಬಂಧಪಟ್ಟಂತೆ ಕೋ-ಆಪರೇಷನ್ ಮಿನಿಸ್ಟರ್ ಮತ್ತು ಗೃಹಸಚಿವರು ಸದನದಲ್ಲಿರುವುದರಿಂದ ದಯವಿಟ್ಟು ಅವರಿಂದ ಉತ್ತರವನ್ನು ಕೊಡಿಸಬೇಕು.

ಛೇರ್ಮನ್ : ಈಗಾಗಲೇ ಶೂನ್ಯ ವೇಳೆಯು ಮುಗಿದಿದೆ, ನಾಳೆ ನಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಛೇರ್ಮನ್‌ರವರೆ, ಬಹಳ ಜರೂರಾದ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ನನಗೆ ಎರಡು ನಿಮಿಷಗಳ ಕಾಲಾವಧಿಯನ್ನು ಮಾತನಾಡುವುದಕ್ಕೆ ಕೊಡಬೇಕು.

ಛೇರ್ಮನ್ : ಇವತ್ತು ಐದು ಗಮನ ಸೆಳೆಯುವ ಸೂಚನೆಯ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇದಕ್ಕಾಗಿ ಸಮಯ ಬೇಕಾಗುತ್ತದೆ. ಬಾಕಿ ಉಳಿದಿರತಕ್ಕಂಥಹ ಶೂನ್ಯ ವೇಳೆಯ ವಿಷಯವನ್ನು ನಾಳೆ ದಿವಸ ತೆಗೆದುಕೊಳ್ಳೋಣ.

ಶ್ರೀ ಗುಂಡಪ್ಪ ವಕೀಲ್ : ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ, ದಯವಿಟ್ಟು ನನಗೆ ಅವಕಾಶವನ್ನು ಕೊಡಿ.